R

# ಕರ್ನಾಟಕ ಉಚ್ಚ ನ್ಯಾಯಲಯ, ಬೆಂಗಳೂರಿನಲ್ಲಿ

**ದಿನಾಂಕ ೧೨ನೇ ಡಿಸಂಬರ್, ೨೦೨೪**

**ಉಪಸ್ಥಿತರು:**

**ಮಾನ್ಯ ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್**

**ಮತ್ತು**

**ಮಾನ್ಯ ನ್ಯಾಯಮೂರ್ತಿ ಸಿ ಎಂ ಜೋಶಿ**

**ಒ.ಎಸ್.ಎ.ಸಂಖ್ಯೆ ೯/೨೦೨೪**

**ನಡುವೆ :**

ಶ್ರೀ. ನಂಜಾವುದೂತ ಸ್ವಾಮೀಜಿ,
ವಯಸ್ಸು ೪೫ ವರ್ಷ,
ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಪೀಠಾಧಿಪತಿ,
ಪಟ್ಟಣಾಯಕನಹಳ್ಳಿ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

...ಮೇಲ್ಮನವಿದಾರರು

(ಶ್ರೀ. ಮನಮೋಹನ್ ಪಿ ಎನ್, ವಕೀಲರು)

**ಮತ್ತು :**

೧. ಶ್ರೀ ಎಸ್ ಲಿಂಗಣ್ಣ,
ತಂದೆ: ಸೋಮಲಿಂಗಣ್ಣ,
ವಯಸ್ಸು ೭೪ ವರ್ಷ,
ಸಿದಿಯನ್ನನಪಾಳ್ಯದಲ್ಲಿ ವಾಸ,
ಪಟ್ಟಣಾಯಕನಹಳ್ಳಿ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

೨. ಶ್ರೀ. ಎಸ್ ಕುಮಾರಸ್ವಾಮಿ,
ತಂದೆ: ಸೋಮಲಿಂಗಣ್ಣ,
ವಯಸ್ಸು ೬೫ ವರ್ಷ,
ಸಿದಿಯನ್ನನಪಾಳ್ಯದಲ್ಲಿ ವಾಸ,
ಪಟ್ಟಣಾಯಕನಹಳ್ಳಿ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

೩. ಜೈ ಪ್ರಾಕಾಶ್,
ತಂದೆ: ಪಿ ಎಲ್ ರಾಮಚಂದ್ರಪ್ಪ,

ವಯಸ್ಸು ೫೦ ವರ್ಷ,
ಪೋಲೀಸ್ ಠಾಣೆಯ ಬಳಿ ವಾಸ,
ಪಟ್ಟಣಾಯಕನಹಳ್ಳಿ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

೪. ಶ್ರೀ. ಬೀರಲಿಂಗಯ್ಯ ಕೆ,
ತಂದೆ: ಕಪ್ಪಣ್ಣ,
ವಯಸ್ಸು ೮೨ ವರ್ಷ,
ಕಾಮಗೊಂಡನಹಳ್ಳಿಯಲ್ಲಿ ವಾಸ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

೫. ಎಸ್ ಸೋಮೇಶಯ್ಯ,
ತಂದೆ: ಸ್ವರ್ಗೀಯ ಸೋಮಲಿಂಗಪ್ಪ,
ವಯಸ್ಸು ೭೭ ವರ್ಷ,
ಸಿದಿಯನ್ನನಪಾಳ್ಯದಲ್ಲಿ ವಾಸ,
ಪಟ್ಟಣಾಯಕನಹಳ್ಳಿ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – ೫೭೨ ೧೩೫.

...ಪ್ರತಿವಾದಿಗಳು

(ಶ್ರೀ. ಡಿ ನಾಗರಾಜ್, ಸಿ/ಆರ್೩, ಆರ್೧ ಮತ್ತು ಆರ್೨ ಗಾಗಿ ವಕೀಲರು)

ಕೆಳಗಿನಂತೆ ಪ್ರಾರ್ಥಿಸಿ ಈ ಒ.ಎಸ್.ಎ.ಯನ್ನು ಕರ್ನಾಟಕ ಉಚ್ಚ ನ್ಯಾಯಲಯ ಅಧಿನಿಯಮ ೧೯೬೧ ರ ಕಲಮು ೪ ರ ಅಡಿಯಲ್ಲಿ ಸಲ್ಲಿಸಲಾಗಿದೆ,:

ಎ) ಈ ಮೇಲ್ಮನವಿಯನ್ನು ಪುರಸ್ಕರಿಸಿ, ಉಯಿಲು ಮೂಲ ದಾವೆ ಸಂಖ್ಯೆ ೧/೨೦೨೩ರಲ್ಲಿ ಸಲ್ಲಿಸಿದ್ದ ಮಧ್ಯಂತರ ಅರ್ಜಿ (I.A.) ಸಂಖ್ಯೆ ೨/೨೦೨೩ರ ಮೇರೆಗೆ ಮಾಡಿದ ದಿನಾಂಕ ೨೧.೦೩.೨೦೨೪ರ ಮಾನ್ಯ ಏಕಸದಸ್ಯ ಪೀಠ ನೀಡಿದ ಆದೇಶವನ್ನು ಅನೂರ್ಜಿತಗೊಳಿಸಿದ್ದು ಮತ್ತು ತತ್ಪರಿಣಾಮವಾಗಿ ಪ್ರತಿವಾದಿಗಳ ಆ ಅರ್ಜಿಯನ್ನು ವಜಾಗೊಳಿಸಿದ್ದು, ಇತ್ಯಾದಿ.

ಏ) ಈ ಒ.ಎಸ್.ಎ.ಯನ್ನು ಆದೇಶಕ್ಕಾಗಿ ಕಾಯ್ದಿರಿಸಲಾಗಿ, ಇಂದು **ಉಚ್ಚರಣೆಗಾಗಿ* ಬಂದಿದ್ದು, ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. **ದೀಕ್ಷಿತ್ ರವರು*, ಈ ಕೆಳಗಿನಂತೆ ತೀರ್ಪಿತ್ತು ಆದೇಶಿಸಿರುತ್ತಾರೆ.

*ಪು. ಸಂಖ್ಯೆ 2ರಲ್ಲಿ ಕಛೇರಿ ಆದೇಶ 18.12.2024 ರಂತೆ ಪುಟ್ಟ ತಿದ್ದುಪಡಿಯನ್ನು ಮಾಡಲಾಗಿದೆ.

**ನ್ಯಾಯಪೀಠ :**

ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್ ದೀಕ್ಷಿತ್
ಮತ್ತು
ಮಾನ್ಯ ನ್ಯಾಯಮೂರ್ತಿ ಶ್ರೀ ಸಿ ಎಂ ಜೋಶಿ.

## ಸಿಎವಿ ತೀರ್ಪು

(ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್ **ದೀಕ್ಷಿತ್ ರವರು* ಬರೆದದ್ದು)

('WHERE THERE IS A WILL, THERE IS A WAY' (ಮನಸ್ಸಿದ್ದಲ್ಲಿ ಮಾರ್ಗ) ಎಂಬ ಇಂಗ್ಲೀಷ್ ಬರಹಗಾರ ಶ್ರೀ ಜಾರ್ಜ್ ಹರ್ಬರ್ಟ್ (೧೫೯೩-೧೬೩೩)ನ ಉಕ್ತಿಯನ್ನು ಈ ತೀರ್ಪಿನ ಆಂಗ್ಲ ರೂಪದಲ್ಲಿ ಉದ್ಧರಿಸಿದ್ದನ್ನು ಓದುಗರು **ನೋಡಿಕೊಳ್ಳಬಹುದು*. ಅಂಗ್ರೇಜಿಯ 'WILL' ಎಂಬ ಶಬ್ದಕ್ಕೆ ಉಯಿಲು ಮತ್ತು ಮನಸ್ಸು ಎಂಬ ಎರಡು ಅರ್ಥಗಳಿರುವುದರಿಂದ ಹರ್ಬರ್ಟ್‌ರ ಹೇಳಿಕೆ ಆಂಗ್ಲಭಾಷಾ ತೀರ್ಪಿನ ವಾಸ್ತವಾಂಶಕ್ಕೆ ಮೊದಲ ನುಡಿಯಾಗಿ ಹೊಂದುತ್ತದೆ; ಕನ್ನಡದಕ್ಕಲ್ಲ).

ಈ ಮೂಲ ಪಕ್ಷದ ಮೇಲ್ಮನವಿಯು ಇದೇ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠ ಮಾಡಿದ ದಿನಾಂಕ ೨೧.೦೩.೨೦೨೪ರ ಆದೇಶವನ್ನು ಪ್ರಶ್ನಿಸುತ್ತದೆ. ಅದರ ಮೂಲಕ ಪ್ರತಿವಾದಿಗಳ ಮಧ್ಯಂತರ ಅರ್ಜಿ ಸಂಖ್ಯೆ ೨/೨೦೨೩ರನ್ನು ಅನುಮೋದಿಸಿ ಮೇಲ್ಮನವಿದಾರ ಸಲ್ಲಿಸಿದ ಉಯಿಲು ಮೂಲ ದಾವೆ ಸಂಖ್ಯೆ ೧/೨೦೨೩ ಇದು 'ಕಾಲಮಿತಿಯನ್ನು ಮೀರಿದ್ದು' ಎಂದು ವಜಾಗೊಳಿಸಲಾಗಿತ್ತು.

**೨. ಪ್ರಕರಣದ ಮೂಲಭೂತ ವಾಸ್ತವಿಕ ಚೌಕಟ್ಟು :**

(ಎ) ಮೇಲ್ಮನವಿದಾರ ತುಮಕೂರು ಜಿಲ್ಲೆಯ ಪಟ್ಟಣಾಯಕನಹಳ್ಳಿಯಲ್ಲಿರುವ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠ ಅಥವಾ 'ನಂಜಪ್ಪಯ್ಯ ಮಠ' ಎಂದೂ ಕರೆಯಲ್ಪಡುವ ಮಠದ ಏಳನೇ ಅವಿಚ್ಛಿನ್ನ ಪೀಠಾಧಿಪತಿಯಾಗಿದ್ದಾನೆ (Pointiff). ಮಠದ ಪರಂಪರೆಯಂತೆ ಹಾಲಿ ಪೀಠಾಧಿಪತಿಯು ತನ್ನ ಮರಣಾನಂತರ ತನಗೆ ಉತ್ತರಾಧಿಕಾರಿಯಾಗಬಹುದಾದ ಸೂಕ್ತ ವ್ಯಕ್ತಿಯನ್ನು ಶಿಷ್ಯನಾಗಿ ಆಯ್ಕೆ ಮಾಡುತ್ತಾನೆ; ತರುವಾಯ ಅವನನ್ನೇ ಪೀಠಾಧಿಪತಿಯಾಗಿ ನೇಮಕಾತಿಯನ್ನು

*ಪು. ಸಂಖ್ಯೆ 3 ರಲ್ಲಿ ಕಛೇರಿ ಆದೇಶ 18.12.2024 ರಂತೆ ಪುಟ್ಟ ತಿದ್ದುಪಡಿಯನ್ನು ಮಾಡಲಾಗಿದೆ.

ಉಯಿಲಿನ ಮೂಲಕ ಮಾಡಲಾಗುವ ಕ್ರಮವಿರುತ್ತದೆ, ಎಂಬುದು ಮೇಲ್ಮನವಿದಾರನ ನಿಲುವಾಗಿದೆ.

(ಬಿ) ಮೇಲ್ಮನವಿದಾರ, ಮಠದ ಈ ಮೊದಲಿನ ಐದನೇ ಪೀಠಾಧಿಪತಿಯಾಗಿದ್ದ ಶ್ರೀ ಗುರುಕುಮಾರ ಅವಧೂತ ಸ್ವಾಮೀಜಿಯವರು ದಿನಾಂಕ: ೦೩.೦೮.೧೯೮೯ರಂದು ಬರೆಯಲಾಗಿದೆ ಎನ್ನಲಾದ ನೋಂದಾಯಿತ ಉಯಿಲಿಗೆ (Will) ಸಂಬಂಧಿಸಿದಂತೆ ಪ್ರೊಬೇಟ್ ಸಿ.ಪಿ.ಸಂಖ್ಯೆ ೩/೨೦೧೭ರಲ್ಲಿ ಉಯಿಲು ಧೃಢೀಕರಣ (Probate) ನಡವಳಿಗಳನ್ನು ಹೂಡಿದ್ದನು. ಈ ಮೊಕದ್ದಮೆಯ ಪ್ರತಿವಾದಿಗಳನ್ನು ದಿನಾಂಕ ೨೭.೦೨.೨೦೨೦ರ ಆದೇಶದಂತೆ ದಾವಾಶೀರ್ಷಿಕೆಗೆ ಪಕ್ಷಗಾರರನ್ನಾಗಿ ಸೇರಿಸಲಾಯಿತು. ಅವರು ಸದರಿ ನಡವಳಿಗಳನ್ನು ವಿರೋಧಿಸಿದ್ದರಿಂದ, ಈ ಮೊಕದ್ದಮೆಯನ್ನು ಉಯಿಲು ಮೂಲ ದಾವೆ ಸಂಖ್ಯೆ ೧/೨೦೨೩ ಆಗಿ ಪರಿವರ್ತಿಸಲಾಯಿತು. ೩ ರಿಂದ ೫ನೇ ಪ್ರತಿವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ, ೧೯೦೮ರ ಆದೇಶ VII ನಿಯಮ ೧೧ (ಡಿ)ಯ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ ೨/೨೦೨೩ರನ್ನು ಸಲ್ಲಿಸಿ, ಈ ಮೊಕದ್ದಮೆಯು 'ಕಾಲಮಿತಿ' ಮೀರಿದ್ದಾಗಿದ್ದಾಗಿರುವುದರಿಂದ ಅದನ್ನು ವಜಾಗೊಳಿಸಬೇಕೆಂದು ಕೋರಿದ್ದರು. ಮಾನ್ಯ ಏಕಸದಸ್ಯ ಪೀಠ ಅದನ್ನು ಅನುಮೋದಿಸಿ ಸದರಿ ದಾವೆಯನ್ನು ವಜಾಗೊಳಿಸಲಾಗಿ ಈ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

**೩. ಮೇಲ್ಮನವಿದಾರನ ಪರವಾಗಿ ಮಾಡಲಾದ ವಾದ ಮಂಡನೆಯ ಕ್ರಮ :-**

ಹಿಂದೂ ಉಯಿಲಿಗೆ ಈಗಿರುವ ಕಾನೂನಿನ ಪ್ರಕಾರ ದೃಢೀಕರಣ ಪತ್ರದ (ಪ್ರೊಬೇಟ್) ಅಗತ್ಯವಿರುವುದಿಲ್ಲ ಅಂತಹ ಯಾವುದೇ ಉಯಿಲು ಕಾಲಮಿತಿಯಿಂದಾಗಿ ಅಮಾನ್ಯವಾಗುವುದೂ ಇಲ್ಲ; ಪ್ರೊಬೇಟ್ ಮೊಕದ್ದಮೆಯ ವಿರೋಧಿ ಬಣವನ್ನು, ದಿನಾಂಕ ೨೭.೦೨.೨೦೨೦ರ ಆದೇಶದ ಮೇರೆಗೆ ಪ್ರತಿವಾದಿಗಳನ್ನಾಗಿಸಲಾಯಿತು; ಪ್ರೊಬೇಟ್ ಕೋರುವ ಹಕ್ಕನ್ನು ಯಾವುದೇ ಸಮಯದಲ್ಲಿ ಚಲಾಯಿಸಬಹುದು; ಪ್ರೊಬೇಟ್ ನಡವಳಿಗಳನ್ನು ವಿಳಂಬ ಮತ್ತು ಕಾಲ ಮಿತಿಯ ಆಧಾರದ ಮೇಲೆ ವಿರೋಧಿಸಲಾಗುವುದಿಲ್ಲ; ಏಕೆಂದರೆ ಅವುಗಳು ನಿರಂತರ ದಾವಾಕಾರಣದ ಅಂಶಗಳನ್ನು ಒಳಗೊಂಡಿರುತ್ತವೆ; ಈ ಮೇಲ್ಮನವಿಯಲ್ಲಿ ಪ್ರಶ್ನಿಸಲ್ಪಟ್ಟ ಆದೇಶವನ್ನು ಅನೂರ್ಜಿತಗೊಳಿಸಿ, ಸದರಿ

ಉಯಿಲು ಮೂಲ ದಾವೆಯನ್ನು ಪುನರುಜ್ಜೀವನಗೊಳಿಸಿ, ಅದರ ವಿಚಾರಣೆಯನ್ನು ಯೋಗ್ಯತಾನುಸಾರ ನಡೆಸಲು ಅನುವು ಮಾಡಿಕೊಡಬೇಕು. ಹೀಗೆ ವಾದವನ್ನು ಮಂಡಿಸಿ, ವಕೀಲರು ಅದಕ್ಕೆ ಬೆಂಬಲವಾಗಿ, ಕೆಲವು ಪೂರ್ವಪ್ರತಿಷ್ಠಿತ ತೀರ್ಪುಗಳನ್ನು ಉಲ್ಲೇಖಿಸಿದರು.

೪. ಇದಕ್ಕೆ ವ್ಯತಿರಿಕ್ತವಾಗಿ, ಪ್ರತಿವಾದಿಗಳ ಪರವಾಗಿ ಹಾಜರಾದ ವಕೀಲರು, ಕಾಲಮಿತಿ ಅಧಿನಿಯಮ, ೧೯೬೩ರ ಪರಿಚ್ಛೇದದಲ್ಲಿನ ಅನುಚ್ಛೇದ ೧೩೭ ಪ್ರೊಬೇಟ್ ನಡವಳಿಗಳಿಗೂ ಅನ್ವಯಿಸುತ್ತದೆ ಎಂದು ಪ್ರಬಲ ವಾದವನ್ನು ಮಂಡಿಸಿ ಮೇಲ್ಮನವಿಯನ್ನು ವಿರೋಧಿಸಿದರು; ಕಾಲ ಮಿತಿಯು, ಪುನರಾವರ್ತಿತ ದಾವಾಕಾರಣವನ್ನು ಆಧರಿಸಿದ ನಡವಳಿಗಳಿಗೂ ಬಾಧಿಸುತ್ತದೆ; ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ ೨೨, ನಿಯಮ ೨ ಮತ್ತು ೪ ರ ಅಡಿಯಲ್ಲಿ ಸಲ್ಲಿಸಲಾದ ಮೇಲ್ಮನವಿದಾರನ ಮಧ್ಯಂತರ ಅರ್ಜಿ ಸಂಖ್ಯೆ ೪ನ್ನು ಅಂದಿನ ಮುನ್ಸೀಫರು ದಿನಾಂಕ: ೧೪.೦೭.೧೯೯೫ರಂದು ಆದೇಶಿಸಿ ತಿರಸ್ಕರಿಸಿದಾಗಲೇ, ಮೇಲ್ಮನವಿದಾರನಿಗೆ ಉಯಿಲು ಮೂಲ ದಾವೆಯನ್ನು ಹೂಡಲು ದಾವಾಕಾರಣ ಉದ್ಭವಿಸಿತ್ತು. ಏಕೆಂದರೆ, ಮೂಲ ದಾವಾ ಸಂಖ್ಯೆ ೯೮/೧೯೮೮ ರಲ್ಲಿ ಮೃತ ವಾದಿಯ ಸ್ಥಾನದಲ್ಲಿ ಸದರಿ ಉಯಿಲಿನ ಆಧಾರದ ಮೇಲೆ ಮೇಲ್ಮನವಿದಾರನು ಆ ಮೊಕದ್ದಮೆಯ ದಾವಾಶೀರ್ಷಿಕೆಗೆ ಬರಲು ಪ್ರಯತ್ನಿಸಿದ್ದನು; ಆ ದಾವೆಯನ್ನು ಹೂಡಿದವನು ಉಯಿಲುದಾರನೇ ಆಗಿದ್ದು, ಬೇರಾರೂ ಅಲ್ಲ. ಹೀಗೆ ವಾದಮಂಡನೆ ಮಾಡಿ ಮೇಲ್ಮನವಿಯನ್ನು ವಜಾಗೊಳಿಸಬೇಕೆಂದು ಕೋರಲಾಯಿತು, ಈ ವಕೀಲರು ಸಹ ತಮ್ಮ ವಾದ ಪುಷ್ಟಿಗೆ ಕೆಲವು ಪೂರ್ವಪ್ರತಿಷ್ಠಿತವಾದ ತೀರ್ಪುಗಳನ್ನು ಅವಲಂಬಿಸಿದರು.

೫. ಪಕ್ಷದಾರರ ವಾದ-ಪ್ರತಿವಾದಗಳನ್ನು ಆಲಿಸಿ, ಮೇಲ್ಮನವಿಯನ್ನು ಅವಲೋಕಿಸಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ನಾವು ಈ ಕೆಳಗಿನ ಕಾರಣಗಳಿಂದಾಗಿ ಪ್ರಶ್ನಿಸಲ್ಪಟ್ಟ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಒಲವು ತೋರುತ್ತೇವೆ:

**೫.೧. ಕಾಲ ಮಿತಿ ಅಧಿನಿಯಮವು ಪ್ರೊಬೇಟ್ ನಡವಳಿಗಳಿಗೆ ಅನ್ವಯಿಸದಿರುವ ಬಗ್ಗೆ :**

(ಎ) ಮೇಲ್ಮನವಿದಾರನ ಪರ ಹಾಜರಾದ ವಕೀಲರ ವಾದ ಕ್ರಮವೇನೆಂದರೆ: ಹಿಂದೂ ಉಯಿಲಿಗೆ ಪ್ರೊಬೇಟ್ ಪಡೆಯುವ ಅಗತ್ಯವಿಲ್ಲದಿರುವುದರಿಂದ, ತಾರ್ಕಿಕವಾಗಿ ಪ್ರೊಬೇಟ್ ಕ್ರಮಗಳನ್ನು ಶುರುವಾಯಿಸಲು ಯಾವುದೇ ಕಾಲಮಿತಿ ಇರುವುದಿಲ್ಲ; ಇಂತಹ ನಡವಳಿಗಳು ನಿರಂತರ ದಾವಾಕಾರಣ ಕ್ರಮದ ವಿಷಯವಾಗುತ್ತವೆ; ಹಾಗಾಗಿ, ಉತ್ತರಾಧಿಕಾರಿಯು ಉಯಿಲನ್ನು ಜಾರಿಗೆ ತರಲು ಬಯಸಿದಾಗಲೆಲ್ಲಾ ಪ್ರೊಬೇಟ್ ನ್ಯಾಯಾಲಯದ ಬಾಗಿಲು ತಟ್ಟಬಹುದು. ಇದಕ್ಕೆ ವ್ಯತಿರಿಕ್ತವಾಗಿ, ಪ್ರತಿರೋಧಿ ಪಕ್ಷದಾರರ ಪರವಾಗಿ ಹಾಜರಾದ ವಕೀಲರ ವಾದ ಮಂಡನೆ ಏನೆಂದರೆ: ಪ್ರತಿಯೊಂದು ಕಾನೂನು ಕ್ರಮಕ್ಕೂ, ಅದು ಐಚ್ಛಿಕವಾಗಿರಲಿ ಅಥವಾ ಇಲ್ಲದಿರಲಿ ರಾಜ್ಯನೀತಿಯ ವಿಷಯವಾಗಿ, ೧೯೬೩ರ ಅಧಿನಿಯಮದ ಪರಿಶಿಷ್ಟದ ವಿವಿಧ ಅನುಚ್ಛೇದದ ಅಡಿಯಲ್ಲಿ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ ಮತ್ತು ಯಾವುದೇ ನಿರ್ದಿಷ್ಟ ಅವಧಿಯನ್ನು ನಿಗದಿಪಡಿಸದೇಯಿದ್ದ ಪಕ್ಷದಲ್ಲಿ ಅಂಥವುಗಳಿಗೆ ಪರಿಚ್ಛೇದದ ಶೇಷಭಾಗ, ಅಂದರೆ ಅನುಚ್ಛೇದ ೧೩೭ರ ಅಡಿಯಲ್ಲಿ ಹೇಳಿರುವ ಮೂರು ವರ್ಷಗಳ ಕಾಲಮಿತಿ ಅನ್ವಯಿಸುತ್ತದೆ. ಈ ಎರಡು ವಿಪರೀತ-ಧ್ರುವ ವಾದಗಳ ಪರಿಗಣನೆಗೆ ಹೆಚ್ಚು ಸಮಯದ ಅಗತ್ಯವಿಲ್ಲ. ಉಯಿಲುಗಳು ಸ್ವಭಾವತಃ ಪರಿವರ್ತನೀಯ; ಹಾಗಾಗಿ ಉಯಿಲುದಾರ ಅವುಗಳನ್ನು ಯಾವುದೇ ಸಮಯದಲ್ಲಿ ಮತ್ತು ಎಷ್ಟೇ ಬಾರಿ ರದ್ದುಗೊಳಿಸಬಹುದು ಅಥವಾ ಮಾರ್ಪಡಿಸಬಹುದು. ವೈಯಕ್ತಿಕ ಕಾನೂನು ಅನ್ವಯಿಸುವ ವ್ಯಕ್ತಿಗಳು ಬರೆಯುವ ಉಯಿಲುಗಳೂ ಸೇರಿದಂತೆ, ಅವು ವಿಶೇಷಾಧಿಕಾರ (Privilege) ಉಯಿಲಾಗಿರಲಿ ಇಲ್ಲವೇ ಸಾಮಾನ್ಯ (un-Privilege) ಉಯಿಲಾಗಿರಲಿ, ಕೇವಲ ಕಾಲಸಂದುವ ಕಾರಣವಾಗಿ ಸಿಂಧುತ್ವವನ್ನು ಕಳೆದುಕೊಳ್ಳುವುದಿಲ್ಲ. ನಿಗದಿತ ಘಟನೆಗಳು ಜರುಗಿದಾಗ, ಉಯಿಲುಗಳು ಅಸಿಂಧು ಆಗಬಹುದು, ಎಂಬುದೂ ನಿಜ. ಕರ್ನಾಟಕದಲ್ಲಿ ಮುದ್ರಾಂಕ ಶುಲ್ಕ ಅಥವಾ ಕಡ್ಡಾಯ ನೋಂದಣಿ, ಉಯಿಲುಗಳಿಗೆ ಅನ್ವಯಿಸುವುದಿಲ್ಲ. ಎಲ್ಲಾ ಉಯಿಲುಗಳನ್ನು ಕಡ್ಡಾಯವಾಗಿ ಪ್ರೊಬೇಟ್ ಮಾಡಬೇಕಾಗಿಲ್ಲ ಎಂಬುದು ಸುನಿಶ್ಚಿತ; ಪ್ರೆಸಿಡೆನ್ಸಿ

ಪಟ್ಟಣಗಳಲ್ಲಿರುವ ಯಾವುದೇ ಆಸ್ತಿಯನ್ನು ಒಳಗೊಂಡಿರದ ಹಿಂದೂ ಉಯಿಲಿಗೆ, ಪ್ರೊಬೇಟ್ ಪಡೆಯುವುದು ಐಚ್ಛಿಕ ಎಂದು **ಕ್ಲಾರೆನ್ಸ್ ಪ್ಲೈಸ್ [ವಿ.] ಭಾರತ ಒಕ್ಕೂಟ**[1] ಎಂಬ ತೀರ್ಪಿನಲ್ಲಿ ಹೇಳಲಾಗಿದೆ. ಪ್ರಶ್ನಿಸಲ್ಪಟ್ಟ ಉಯಿಲು ಅಂತಹ ಪಟ್ಟಣಗಳಲ್ಲಿರುವ ಯಾವುದೇ ಆಸ್ತಿಯನ್ನು ಒಳಗೊಂಡಿಲ್ಲವಾದ್ದರಿಂದ ಅದಕ್ಕೆ ಪ್ರೊಬೇಟಿನ ಅಗತ್ಯವಿಲ್ಲ. ಇದೆಲ್ಲದರ ಕುರಿತು ಉಭಯ ನ್ಯಾಯವಾದಿಗಳಲ್ಲಿ ವಿವಾದವಿಲ್ಲ.

(ಬಿ) ಉಯಿಲುಗಳು ಕಾಲಾಂತರದಲ್ಲಿ ಅಸಿಂಧುಗೊಳ್ಳದಿದ್ದರೆ, ಉಯಿಲುಗಾರನ ಉದ್ದೇಶವು ಈಡೇರಲು ನಿರಂತರವಾಗಿ ಉಳಿಯುತ್ತದೆ ಎಂಬುದು, ಅತಿರೇಕದ ಪ್ರತಿಪಾದನೆಯಾದೀತು ಮತ್ತು ಈ ಪ್ರಕರಣದಲ್ಲಿ ಅಂಥ ವಾದ ಮಂಡನೆ ಇರುವುದಿಲ್ಲ. ಮೇಲ್ಮನವಿಯಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆ ಏನೆಂದರೆ: ನಿರಂತರ ದಾವಾ ಕಾರಣವನ್ನು ಒಳಗೊಂಡಿರುವ ಪ್ರೊಬೇಟ್ ಮೊಕದ್ದಮೆಗಳು ಸಹ ಕಾಲಮಿತಿಗೆ ಒಳಪಡುತ್ತವೆಯೇ...? **ಸಮೀರ್ ಕಪೂರ್ [ವಿ.] ಉಪವಿಭಾಗ ಮ್ಯಾಜಿಸ್ಟ್ರೇಟ್**[2] ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಲಯದ ತೀರ್ಪಿನ ಪ್ರಕಾರ ಈ ಪ್ರಶ್ನೆಗೆ ಉತ್ತರ "ಹೌದು" ಎಂದಾಗಬೇಕಾಗುತ್ತದೆ. ಆದ್ದರಿಂದ, ೧೯೬೩ರ ಅಧಿನಿಯಮ ಇತರೆ ಮೊಕದ್ದಮೆಗಳಿಗೆ ಅನ್ವಯಿಸುವಂತೆಯೇ ಉಯಿಲುಗಳಿಗೂ ಅನ್ವಯಿಸುತ್ತದೆ ಎಂಬುದು ನಿರ್ವಿವಾದಿತ. ಅಧಿನಿಯಮದಡಿಯಲ್ಲಿ ಯಾವುದೇ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸದೆಯಿರುವ ಪಕ್ಷದಲ್ಲಿ, ಶೇಷ-ನಿಬಂಧನೆ, ಅಂದರೆ ಅನುಚ್ಛೇದ ೧೩೭ ಅನ್ವಯಿಸುತ್ತದೆ. ಈ ವಿಧಿಯು ಯಾವುದೇ ನಿರ್ದಿಷ್ಟ ಕಾಲಮಿತಿಯನ್ನು ನಿಗಿದಿಪಡಿಸದಿದ್ದಲ್ಲಿ, ಅಂಥವುಗಳಿಗೆ ಮೂರು ವರ್ಷಗಳ ಕಾಲಮಿತಿಯನ್ನು ವಿಧಿಸುತ್ತದೆ ಮತ್ತು ಅಂಥ ನಡವಳಿಯನ್ನು ಪ್ರಾರಂಭಿಸಲು ಹಕ್ಕು ಉದ್ಭವಿಸುವ ದಿನಾಂಕದಿಂದ ಈ ಕಾಲಮಿತಿಯನ್ನು ಲೆಕ್ಕಹಾಕಬೇಕು, ಎಂದು ಹೇಳುತ್ತದೆ. ಆದಾಗ್ಯೂ, ಇದು ಚರ್ಚೆಯ ಅಂತ್ಯವಲ್ಲ.

[1] AIR 2001 SC 1151
[2] (2020) 12 SCC 480

**೫.೨. ಮನವಿದಾರನು ಮೂಲ ವ್ಯಾಜ್ಯ ಹೂಡಲು ದಾವಾಕಾರಣ ಯಾವಾಗ ಉದ್ಭವಿಸಿತ್ತು ಎಂಬುದರ ಬಗ್ಗೆ :**

(ಎ) ಪ್ರಕರಣದ ಅಗತ್ಯ ಸಂಗತಿಗಳ ವ್ಯೂಹದಲ್ಲಿ ಹೆಚ್ಚಿನ ವಿವಾದವಿರುವುದಿಲ್ಲ, ಎಂಬುದನ್ನು ನಾವು ಮೊದಲೇ ಹೇಳಿಬಿಡುತ್ತೇವೆ: ಉಯಿಲುದಾರ ಶ್ರೀ ಗುರುಕುಮಾರ ಅವಧೂತ ಸ್ವಾಮೀಜಿಯವರು ೩ ನೇ ಪ್ರತಿವಾದಿಯ ತಂದೆ ಶ್ರೀ ಪಿ.ಎಲ್.ರಾಮಚಂದ್ರಪ್ಪ ಅವರ ವಿರುದ್ಧ ಮೂಲ ದಾವಾ ಸಂಖ್ಯೆ ೯೮/೧೯೮೮ರನ್ನು ಹೂಡಿದ್ದರು; ಆ ದಾವೆ ಮಠಕ್ಕೆ ಸೇರಿದ್ದು ಎನ್ನಲಾದ ೨೩.೨ ಎಕರೆ ಜಮೀನಿಗೆ ಸಂಬಂಧಿಸಿತ್ತು. ಮೊಕದ್ದಮೆ ಚಲಾವಣೆಯಲ್ಲಿರುವಾಗಲೇ ಅವರು ಕಾಲವಾದರು. ಅವರ ವಾರಸುದಾರನಾಗಿ ತನ್ನನ್ನು ಪ್ರಕರಣದ ದಾವಾಶೀರ್ಷಿಕೆಗೆ ಸೇರಿಸಬೇಕು ಎಂದು ಮೇಲ್ಮನವಿದಾರನು ವಾರಸಾ ಅರ್ಜಿಯನ್ನು ಸಲ್ಲಿಸಿದ್ದನು. ಆ ಅರ್ಜಿಯನ್ನು ಸದರಿ ಉಯಿಲನ್ನು ಆಧರಿಸಿ ಸಲ್ಲಿಸಲಾಗಿತ್ತು. ಅದನ್ನು ದಿನಾಂಕ ೧೪.೦೭.೧೯೯೫ರಂದು ವಜಾಗೊಳಿಸಲಾಯಿತು; ಉಯಿಲು ಅಸಿಂಧುವಾದದ್ದು ಎಂದು ಮಾನ್ಯ ಮುನ್ಸೀಫರು ನಿರ್ದಿಷ್ಟವಾಗಿ ಆದೇಶದಲ್ಲಿ ಹೇಳಿದ್ದರು. ಇದನ್ನು ಇದೇ ಮೇಲ್ಮನವಿದಾರ ಸಿ.ಆರ್.ಪಿ ಸಂಖ್ಯೆ ೨೮೭೧/೧೯೯೫ರಲ್ಲಿ ಪ್ರಶ್ನಿಸಿದ್ದನು. ಈ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠ ದಿನಾಂಕ ೨೦.೦೯.೧೯೯೬ರ ಆದೇಶದ ಮೂಲಕ ಆ ಸಿ.ಆರ್.ಪಿಯನ್ನು ವಜಾಗೊಳಿಸಿತು. ಈ ಸಂದರ್ಭದಲ್ಲಿ ಪ್ರೊಬೇಟ್ ನಡವಳಿ ಹೂಡುವ ಹಕ್ಕಿನ ಬಗ್ಗೆ ಹೇಳಲಾಗಿದೆ. ಸದರಿ ಉಯಿಲಿನ ಅಸಿಂಧುತ್ವದ ಬಗ್ಗೆ ಮಾನ್ಯ ಮುನ್ಸೀಫರು ಹೇಳಿದ್ದನ್ನು ಮಾನ್ಯ ಏಕಸದಸ್ಯ ಪೀಠ ಈ ಕೆಳಗಿನಂತೆ ಹೇಳುವ ಮೂಲಕ ರದ್ದುಗೊಳಿಸಿದೆ:

> *"...ಮತ್ತೊಂದೆಡೆ, ವಿಚಾರಣಾ ನ್ಯಾಯಾಲಯವು ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯವು ನಿರ್ಣಾಯಕವಲ್ಲ ಅಥವಾ ಅದು ಮುಂಬರುವ ಮರುಪರಿಶೀಲನಾ ಕ್ರಮವನ್ನು ಬಾಧಿಸುವುದಿಲ್ಲ ಮತ್ತು ಅಂತಹ ಆದೇಶವು ಮೊಕದ್ದಮೆಯನ್ನು ಕೇವಲ ಮುಂದುವರಿಸುವ ಉದ್ದೇಶಕ್ಕಾಗಿ ಮಾತ್ರ,, ಎಂದು ಈ ನ್ಯಾಯಾಲಯವು ೧೯೭೫(೧) ಕರ್ನಾಟಕ ಲಾ ಜನರಲ್, ಚಿಕ್ಕ ಟಿಪ್ಪಣಿಗಳು ಐಟಂ ಸಂಖ್ಯೆ ೩೯ **(ರಾಜಮ್ಮ [ವಿ.] ಚಂದ್ರಶೇಖರಯ್ಯ – ಸಿ.ಆರ್.ಪಿ.ಸಂಖ್ಯೆ ೬೦೨/೭೪)** ರಲ್ಲಿ ಅಭಿಪ್ರಾಯಪಟ್ಟಿದೆ. ಮೇಲ್ಮನವಿದಾರರು ತಮ್ಮ ಹಕ್ಕುಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಜರುಗಿಸುವುದು*

*ಖಂಡಿತವಾಗಿಯೂ ಮುಕ್ತವಾಗಿದೆ. ಆದೇಶದ ಭಾಗವು ಯಾವುದೇ ರೀತಿಯಲ್ಲಿ ಪಕ್ಷಗಳ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ನಾನು ಭಾವಿಸುವುದಿಲ್ಲ..."*

(ಬಿ) ಮಾನ್ಯ ಏಕಸದಸ್ಯ ಪೀಠದ ಮೇಲಿನ ಆದೇಶವು, ವಾದೀಯವಾಗಿ (Arguably) ಸರಿಯಾಗಿರಲಿ ಅಥವಾ ತಪ್ಪಾಗಿರಲಿ, ಅದು ಪಕ್ಷಗಾರರ ಕುರಿತಂತೆ ಅಂತಿಮತೆಯನ್ನು ಪಡೆದುಕೊಂಡಿದೆ. ಏಕೆಂದರೆ ಅದರ ಸಿಂಧುತ್ವವನ್ನು ಮುಂದುವರಿದು ಯಾರೂ ಪ್ರಶ್ನಿಸಿರುವುದಿಲ್ಲ. **ಸ್ಮಿತ್ [ವಿ.] ಪೂರ್ವ ಎಲ್ಲೋರ್ ಗ್ರಾಮೀಣ ಜಿಲ್ಲಾ ಮಂಡಳಿಯ**[3] ತೀರ್ಪಿನಲ್ಲಿ ಲಾರ್ಡ್ ರೆಡ್‌ಕ್ಲಿಫ್ ಎಂಬ ಇಂಗ್ಲಿಷ್ ನ್ಯಾಯಾಧೀಶರ ಉಕ್ತಿ ಹೀಗಿದೆ:

*"...ಒಂದು ಆದೇಶವು ದುರುದ್ದೇಶದಿಂದ ಮಾಡಿದ್ದರೂ, ಅದು ಕಾನೂನು ಪರಿಣಾಮಗಳನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿದೆ. ಅದು ಅಮಾನ್ಯತೆಯ ಯಾವುದೇ ಹಣೆಪಟ್ಟಿಯನ್ನು ಹಂಚಿಕೊಂಡಿರುವುದಿಲ್ಲ. ಅಮಾನ್ಯತೆಯ ಕಾರಣವನ್ನು ಸಾಬೀತುಪಡಿಸಿ ಅದನ್ನು ರದ್ದುಗೊಳಿಸಲು ಅಥವಾ ಅಸಿಂಧುಗೊಳಿಸಲು ಕಾನೂನಿನನ್ವಯ ಕ್ರಮಗಳನ್ನು ತೆಗೆದುಕೊಳ್ಳದ ಹೊರತು, ಅದು ಅತ್ಯಂತ ದೋಷರಹಿತ ಆದೇಶವಾಗಿ ಮತ್ತು ಅದರ ಸ್ಪಷ್ಟ ಉದ್ದೇಶಕ್ಕಾಗಿ ಪರಿಣಾಮಕಾರಿಯಾಗಿಯೇ ಉಳಿಯುತ್ತದೆ.."*

ಕಳೆದ ದಶಕಗಳ ಶ್ರೇಷ್ಠ ನ್ಯಾಯಶಾಸ್ತ್ರಜ್ಞರಾದ ಪ್ರೊ. ವೇಡ್[4] (೧೯೧೮-೨೦೦೪) ತಮ್ಮ ಉತ್ಕೃಷ್ಟ ಹೊತ್ತಿಗೆಯಲ್ಲಿ, ಒಂದು ಹೆಜ್ಜೆ ಮುಂದೆ ಹೋಗಿ, ಹೀಗೆ ಬರೆಯುತ್ತಾರೆ :

*"...ಅಮಾನ್ಯತೆಯ ಹಣೆಪಟ್ಟಿ ಸ್ಪಷ್ಟವಾಗಿ ಗೋಚರಿಸಿದರೂ ಮೇಲಿನ ತತ್ವವು ಅಷ್ಟೇ ದಿಟವಾಗಿದೆ; ಏಕೆಂದರೆ, ಅಲ್ಲಿಯೂ ಸಹ ನ್ಯಾಯಾಲಯದ ತೀರ್ಪನ್ನು ಪಡೆಯುವ ಮೂಲಕ ಮಾತ್ರ ಅಂತಹ ಆದೇಶವನ್ನು ಕಾನೂನಿನಲ್ಲಿ ಪರಿಣಾಮಕಾರಿಯಾಗಿ ಪ್ರತಿರೋಧಿಸಬಹುದು.. ವಸ್ತುನಿಷ್ಠವಾಗಿ ಹೇಳುವುದಾದರೆ ನ್ಯಾಯಾಲಯವು 'ಸರಿಯಾದ ಪರಿಹಾರವನ್ನು ಸರಿಯಾದ ವ್ಯಕ್ತಿಯು ಸರಿಯಾದ ಕ್ರಮಗಳು ಮತ್ತು ಸಂದರ್ಭಗಳಲ್ಲಿ ಕೋರಿದರೆ ಮಾತ್ರ ಅಂತಹ ಆದೇಶವನ್ನು ಅಮಾನ್ಯಗೊಳಿಸುತ್ತದೆ. ಆದೇಶವು ಕಾಲ್ಪನಿಕವಾಗಿ ಅಸಿಂಧುವಾಗಿರಬಹುದು,. ಆದರೆ ನ್ಯಾಯಾಲಯವು ಆಗಲೂ ಅದನ್ನು*

[3] (1956) AC 736 at 769
[4] Administrative Law 6th Ed. p. 352

*ಅನೂರ್ಜಿತಗೊಳಿಸಲು ನಿರಾಕರಿಸಬಹುದು.. ಏಕೆಂದರೆ ವಾದಿಗೆ ವ್ಯಾಜ್ಯ ಸ್ಥಾಯಿತ್ವ (Locus Standii) ಇಲ್ಲ; ಏಕೆಂದರೆ ಅವನು ವಿವೇಚನೆಯ ಪರಿಹಾರಕ್ಕೆ ಅರ್ಹನಲ್ಲ; ಏಕೆಂದರೆ ಅವನು ತನ್ನ ಹಕ್ಕುಗಳನ್ನು ಪರಿತ್ಯಾಗ ಮಾಡಿದ್ದಾನೆ ಅಥವಾ ಇನ್ನಾವುದೇ ಕಾನೂನು ಕಾರಣಕ್ಕಾಗಿ ಅಂತಹ ಯಾವುದೇ ಸಂದರ್ಭದಲ್ಲಿ 'ಶೂನ್ಯಾದೇಶವು' ಪರಿಣಾಮಕಾರಿಯಾಗಿಯೇ ಉಳಿಯುತ್ತದೆ ಮತ್ತು ವಾಸ್ತವದಲ್ಲಿ ಸಿಂಧುವಾಗಿರುತ್ತದೆ.."*

ಮೇಲಿನ ತಜ್ಞಾಭಿಪ್ರಾಯವನ್ನು **ಪ್ರಹ್ಲಾದ್ ರಾವತ್ [ವಿ.] ಎ.ಐ.ಐ.ಮ್.ಎಸ್.**[5] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಒಪ್ಪಿ ಪುನರುಚ್ಚರಿಸಿದೆ.

(ಸಿ) ಪ್ರಶ್ನಿಸಲ್ಪಟ್ಟ ಉಯಿಲಿನ ಸಿಂಧುತ್ವ ಕುರಿತು ಮಾನ್ಯ ಮುನ್ಸೀಫ್ ಅವರ ಅವಲೋಕನೆಗಳು ನಿರ್ಣಾಯಕವಲ್ಲ ಅಥವಾ ಅವು ಪೂರ್ವನಿರ್ಣಯ ತತ್ವವನ್ನಾಧರಿಸಿ (Res Judicata) ನಂತರದ ಹಕ್ಕು ಪ್ರತಿಪಾದನೆಯ ನಡವಳಿಗಳನ್ನು ಪ್ರತಿರೋಧಿಸುವುದಿಲ್ಲ. ಅರ್ಜಿದಾರರು ತಮ್ಮ ಹಕ್ಕನ್ನು ಪಡೆಯಲು ಸೂಕ್ತವಾದ ಕ್ರಮಗಳನ್ನು ಪ್ರಾರಂಭಿಸಲು ಖಂಡಿತವಾಗಿಯೂ ಮುಕ್ತರಾಗಿದ್ದಾರೆ, ಎಂಬುದನ್ನು ಮಾನ್ಯ ಏಕಸದಸ್ಯ ಪೀಠವು ನಿರ್ದಿಷ್ಟವಾಗಿ ಪ್ರತಿಷ್ಠಾಪಿಸಿದೆ. ಪೂರ್ವನಿರ್ಣಯ ಸಿದ್ಧಾಂತವು ಎಲ್ಲಾ ನ್ಯಾಯಯುತ ಅಪವಾದಗಳಿಗೆ ಒಳಪಟ್ಟು, ಅದದೇ ದಾವಾಕಾರಣ ಹಾಗೂ ಅದದೇ ಕಕ್ಷಿದಾರರನ್ನು ಅವಲಂಬಿಸುತ್ತದೆ, ಎಂಬುದನ್ನು ಪುನಃ ಹೇಳುವ ಅಗತ್ಯವಿಲ್ಲ. ಅದಲ್ಲದೆ ಮೂಲ ದಾವಾ ಸಂಖ್ಯೆ ೯೮/೧೯೮೮ರಲ್ಲಿನ ನಡವಳಿಗಳು ಸರ್ವಬಾಧ್ಯ (In Rem) ಆದೇಶದಲ್ಲಿ ಅಂತಿಮಗೊಳ್ಳುವಂತಿರಲಿಲ್ಲ. ಹಾಗಾಗಿ, ಆ ದಾವೆಯಲ್ಲಿ ಸಲ್ಲಿಸಲಾದ ಒಂದು ಉಯಿಲನ್ನು ಆಧರಿಸಿದ ಉತ್ತರದಾಯಿ ಅರ್ಜಿ ೪ಕ್ಕೆ (LR Application) ಸರ್ವಬಾಧ್ಯ ಗುಣಾಂಶಗಳಿರುವುದಿಲ್ಲ. ಮಾನ್ಯ ಏಕಸದಸ್ಯ ಪೀಠ ಮಾಡಿರುವ ಅವಲೋಕನದ ಹಿನ್ನೆಲೆಯಲ್ಲಿ ಮೇಲ್ಮನವಿದಾರನ ಪರವಾಗಿ ಮಾಡಿದ ವಾದವು ಪುಷ್ಟಿಯನ್ನು ಪಡೆಯುತ್ತದೆ. ಕೇವಲ ಸದರಿ ಅರ್ಜಿ ವಜಾಗೊಂಡ ಮಾತ್ರಕ್ಕೆ ಸದರಿ ಉಯಿಲಿಗಾಗಿ ಪ್ರೊಬೇಟ್ ನಡವಳಿಗಳನ್ನು ಪ್ರಾರಂಭಿಸಲು ದಾವಾಕಾರಣ ಪೂರ್ಣವಾಗಿ ಮಾಗಿರಲಿಲ್ಲ, ಎಂಬ ಮೇಲ್ಮನವಿದಾರನ ವಾದ ಮನ್ನಣೆ ಪಡೆಯುತ್ತದೆ.

---

[5] (2021) 14 SCC 472

**೫.೩. ೧೯೬೩ರ ಅಧಿನಿಯಮದ ಕಲಂ ೧೪ರ ಅಡಿ, ಇದೇ ವಿಷಯ ಕುರಿತು ದಾಖಲಾದ ಇತರೆ ಮೊಕದ್ದಮೆಗಳಲ್ಲಿ ಗತಿಸಿದ ಅವಧಿಗೆ ರಿಯಾಯಿತಿ ನೀಡುವ ಬಗ್ಗೆ :**

(ಎ) ಈ ದೀರ್ಘಾವಧಿ ಕಾನೂನು ಸಮರಕ್ಕೆ ಇನ್ನೊಂದು ಆಯಾಮವುಂಟು: ಮೇಲೆ ಈಗಾಗಲೇ ಗಮನಿಸಿದಂತೆ, ಪ್ರಶ್ನಿಸಲ್ಪಟ್ಟ ಉಯಿಲಿನ ಕರ್ತೃ ಮೂಲ ದಾವಾ ಸಂಖ್ಯೆ ೯೮/೧೯೮೮ನ್ನು ಸಲ್ಲಿಸಿದ್ದನು. ಮೊಕದ್ದಮೆ ಚಾಲ್ತಿಯಲ್ಲಿರುವಾಗಲೇ ಅವನು ಕಾಲವಾದನು. ಅದೇ ಉಯಿಲನ್ನಾಧರಿಸಿ ದಾಖಲಿಸಿದ್ದ ಮೇಲ್ಮನವಿದಾರನ ಉತ್ತರದಾಯಿ ಅರ್ಜಿಯನ್ನು ದಿನಾಂಕ: ೧೪.೦೭.೧೯೯೫ರ ಆದೇಶದಂತೆ ತಿರಸ್ಕರಿಸಲಾಯಿತು. ಸಿಆರ್‌ಪಿ ಸಂಖ್ಯೆ ೨೮೭೧/೧೯೯೫ರಲ್ಲಿ ಆ ಆದೇಶವನ್ನು ಪ್ರಶ್ನಿಸಿದ್ದು, ಸಿಆರ್‌ಪಿಯು ದಿನಾಂಕ: ೨೦.೦೯.೧೯೯೬ರಂದು ಅಂತಿಮವಾಗಿ ವಿಲೇವಾರಿ ಹೊಂದಿತು. ಮಾನ್ಯ ಮುನ್ಸೀಫರು ಉಯಿಲಿನ ಅಸಿಂಧುತ್ವದ ಕುರಿತು ತಮ್ಮ ಆದೇಶದಲ್ಲಿ ದಾಖಲಿಸಿದ್ದ ಅಭಿಪ್ರಾಯವನ್ನು, ಸಿಆರ್‌ಪಿಯ ಅಂತಿಮ ಆದೇಶದಲ್ಲಿ ಅಮಾನ್ಯ ಮಾಡಲಾಯಿತು. ಈ ಮಧ್ಯೆ, ದಿನಾಂಕ ೦೩.೦೧.೧೯೯೬ರಂದು ಮೂಲ ದಾವಾ ಸಂಖ್ಯೆ ೧/೧೯೯೬ನ್ನು ಸಲ್ಲಿಸಲಾಗಿತ್ತು. ಇದರಲ್ಲಿ ವಿವಾದಾಂಶ ಸಂಖ್ಯೆ ೯, ಉಯಿಲಿನ ಸಿಂಧುತ್ವದ ಬಗ್ಗೆ ಇದ್ದು, ಅದರ ಒಕ್ಕಣಿ ಈ ಕೆಳಗಿನಂತಿದೆ:

> *"...ಪ್ರತಿವಾದಿಗಳು ಶ್ರೀ ಕುಮಾರಾವಧೂತ ಸ್ವಾಮೀಜಿಗಳು ನೋಂದಾಯಿತ ಉಯಿಲನ್ನು ಬರೆದಿಟ್ಟು ಹೋಗಿದ್ದಾರೆ ಮತ್ತು ಆ ಉಯಿಲಿನಡಿಯಲ್ಲಿ ಶ್ರೀ ನಂಜಾವಾಧೂತ ಸ್ವಾಮೀಜಿ, ಅಂದರೆ ಮೊದಲ ಪ್ರತಿವಾದಿಯು ಮಠದ ಪೀಠವನ್ನು ಯಶಸ್ವಿಯಾಗಿ ಪಡೆದಿರುತ್ತಾರೆ ಎಂದು ಸಾಬೀತುಪಡಿಸುತ್ತಾರೆಯೇ...?"*

ಹೀಗಾಗಿ, ಸದರಿ ಉಯಿಲಿನ ಸಿಂಧುತ್ವದ ಪ್ರಶ್ನೆ ಯಾವಾಗಲೂ ಜ್ವಲಂತವಾಗಿಯೇ ಉಳಿದಿತ್ತು ಎಂದು ಪರಿಗಣಿಸಬೇಕಾಗುತ್ತದೆ.

(ಬಿ) ಮೇಲಿನ ಮೊಕದ್ದಮೆ ಅಂದರೆ ದಿವಾಣಿ ದಂಡ ಪ್ರಕ್ರಿಯೆಯ ಕಲಮು ೯೨ರಡಿ ದಾಖಲಿಸಿದ್ದ ಮೂಲ ದಾವಾ ಸಂಖ್ಯೆ ೧/೧೯೯೬ರಲ್ಲಿ ರೂಪಿಸಿದ

ವಿವಾದಾಂಶ ಸಂಖ್ಯೆ ೭ ಕೂಡ ಪ್ರಸ್ತುತವಾಗಿದೆ. ಅದರ ಒಕ್ಕಣಿ ಈ ಕೆಳಗಿನಂತೆ ಇತ್ತು;

> *"...ಧಾರ್ಮಿಕ ಮತ್ತು ದತ್ತಿ ನ್ಯಾಸವು ಅಸ್ತಿತ್ವದಲ್ಲಿದೆಯೇ ಮತ್ತು ಈ ಮೊಕದ್ದಮೆಯನ್ನು ಸಿಪಿಸಿಯ ಕಲಂ ೯೨ರ ಅಡಿಯಲ್ಲಿ ನಿರ್ವಹಿಸಬಹುದೇ..?"*

ಈ ಕಲಮು, ಸಾರ್ವಜನಿಕ ದತ್ತಿ ನ್ಯಾಸಗಳಂತಹ ಸಂಸ್ಥೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನು ನಿರ್ವಹಿಸುವಲ್ಲಿ ವಿಶೇಷ ವಿಧಾನವನ್ನು ಸೂಚಿಸುತ್ತದೆ. ಸದರಿ ಮೊಕದ್ದಮೆಯಲ್ಲಿ ವಿವಾದಾಂಶ ಸಂಖ್ಯೆ. ೯ನ್ನು ಇದೇ ಉಯಿಲಿನ ಸಿಂಧುತ್ವಕ್ಕೆ ಸಂಬಂಧಿಸಿದಂತೆ ರೂಪಿಸಲಾಗಿತ್ತು. ಆದರೆ ಮೇಲೆ ಹೇಳಿದ ವಿವಾದಾಂಶ ಸಂಖ್ಯೆ ೭ರ ಮೇಲಿನ ನಕಾರಾತ್ಮಕ ಉತ್ತರದಿಂದಾಗಿ, ದಿನಾಂಕ: ೨೮.೦೭.೨೦೧೬ರಂದು ಆ ಮೂಲ ದಾವೆಯನ್ನೇ ವಜಾಗೊಳಿಸಲಾಯಿತು. ಸದರಿ ಆದೇಶದ ವಾಕ್ಯವೃಂದ ೩೬ರಲ್ಲಿ ಈ ಕೆಳಗಿನಂತೆ ಹೇಳಿದ್ದು ತುಂಬ ಪ್ರಸ್ತುತವಾಗುತ್ತದೆ;

> *"...ವಿವಾದಾಂಶ ಸಂಖ್ಯೆ.೧ ರಿಂದ ೬, ೮ ರಿಂದ ೧೨: ವಿವಾದಾಂಶ ಸಂಖ್ಯೆ ೭ ರ ಕುರಿತು ಉತ್ತರ ನಕಾರಾತ್ಮಕವಾಗಿರುವುದರಿಂದ, ಈ ವಿವಾದಾಂಶಗಳು ಪರಿಗಣನೆಗೆ ಉಳಿಯುವುದಿಲ್ಲ. ವಾದಿಗಳು ಮೊಕದ್ದಮೆಯ ಅರ್ಹತೆಯನ್ನು ಸಾಬೀತುಪಡಿಸಲು ವಿಫಲವಾದ ನಂತರ, ನನ್ನ ಭೂತಪೂರ್ವ ಸಹವರ್ತಿಯು ರೂಪಿಸಿದ ಇತರ ವಿವಾದಾಂಶಗಳನ್ನು ಪರಿಗಣಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಆದ್ದರಿಂದ, ನಾನು ಈ ವಿವಾದಾಂಶಗಳಿಗೆ ಆ ಪ್ರಕಾರವೇ ಉತ್ತರಿಸುತ್ತೇನೆ..."*

ಅದರ ನಂತರವೇ, ಪ್ರೊಬೇಟ್ ಪ್ರದಾನಕ್ಕಾಗಿ ಅರ್ಜಿ ಸಲ್ಲಿಸಲು ದಾವಾಕಾರಣವು ಪೂರ್ಣಫಲಿತವಾಗುತ್ತದೆ, ಎಂಬ ವಾದವನ್ನು ಪುರಸ್ಕರಿಸಬೇಕಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರೊಬೇಟ್ ಕೋರಿ ಅರ್ಜಿ ಸಲ್ಲಿಸುವ ಹಕ್ಕು ಆಗ ಮಾತ್ರ ಪೂರ್ಣವಾಗಿ (Choate) ಉದ್ಭವಿಸುತ್ತದೆ. ಅಲ್ಲಿಯವರೆಗೆ ಅದು ಪೂರ್ಣಗೊಳ್ಳುವ ಪ್ರಕ್ರಿಯೆಯಲ್ಲಿತ್ತು, ಎಂದು ಹೇಳಬಹುದು.

(ಸಿ) ಮೇಲಿನ ಮೊಕದ್ದಮೆಯನ್ನು ವಜಾಗೊಳಿಸಿದ ನಂತರ ಏನಾಯಿತು ಎಂದು ನೋಡೋಣ. ಮೂಲ ದಾವೆಯನ್ನು ದಿನಾಂಕ: ೨೮.೦೭.೨೦೧೬ರಂದು ವಜಾಗೊಳಿಸಿದ ನಂತರ, ಅರ್ಜಿದಾರರು ದಿನಾಂಕ: ೧೪.೦೨.೨೦೧೭ರಂದು

ಪ್ರೊಬೇಟ್ ಸಿ.ಪಿ. ಸಂಖ್ಯೆ ೩/೨೦೧೭ನ್ನು ದಾಖಲಿಸಿದರು. ಪ್ರತಿವಾದಿಗಳು ಆ ನಡವಳಿಯನ್ನು ಪ್ರತಿರೋಧಿಸಿದ್ದರಿಂದ, ದಾವಾ ಶೀರ್ಷಿಕೆಗೆ ಅವರನ್ನು ಸೇರಿಸಲಾಗಿ, ಅದು ಟಿ.ಒ.ಎಸ್. ಸಂಖ್ಯೆ. ೧/೨೦೨೩ ಎಂದು ಮರುನೋಂದಾವಣಿಗೊಂಡಿತು. ಮೊಕದ್ದಮೆಯು ಕಾಲಮಿತಿಯಲ್ಲಿ ಇದೆಯೇ ಎಂದು ಪರಿಗಣಿಸುವಾಗ ೧೯೬೩ರ ಅಧಿನಿಯಮದ ಕಲಂ ೧೪ರ ಅಡಿಯಲ್ಲಿ ಶಾಸನೀಯತೆ ಪಡೆದ ನಿಯಮಕ್ಕೆ ಅನುಗುಣವಾಗಿ ಮೇಲ್ಕಾಣಿಸಿದ ಎರಡು ಮೊಕದ್ದಮೆಗಳು ಚಾಲ್ತಿಯಲ್ಲಿದ್ದ ಅವಧಿಯನ್ನು ಕಳೆಯಬೇಕಾಗುತ್ತದೆ. ತದನಂತರವೇ ಅನುಚ್ಛೇದ ೧೩೭ರಲ್ಲಿ ನಿಯಮಿಸಿದ ಮೂರು ವರ್ಷದ ಕಾಲಮಿತಿಯನ್ನು ಗಣಿಸಬೇಕಾಗುತ್ತದೆ. ಅಂದರೆ, ದಿನಾಂಕ ೧೪.೦೭.೧೯೯೫ರಂದು ವಜಾಗೊಂಡ ಮೂಲ ದಾವಾ ಸಂಖ್ಯೆ ೯೮/೧೯೮೮ರಿಂದ ಮತ್ತು ದಿನಾಂಕ ೨೮.೦೭.೨೦೧೬ರಂದು ವಜಾಗೊಂಡ ಇನ್ನೊಂದು ಮೂಲ ದಾವಾ ಸಂಖ್ಯೆ ೧/೧೯೯೬ರ ವರೆಗೆ, ಇರುವ ಕಾಲಾವಧಿಯನ್ನು ಕಡಿತಗೊಳಿಸುವ ರಿಯಾಯಿತಿ ನೀಡಬೇಕಾಗುತ್ತದೆ. ಈ ಅನಚ್ಛೇದವು ಕೆಳಗಿಂತೆ ಓದಿಸಿಕೊಳ್ಳುತ್ತದೆ:

> *"...೧೪. ನ್ಯಾಯವ್ಯಾಪ್ತಿಯಿಲ್ಲದ ನ್ಯಾಯಾಲಯದಲ್ಲಿ ಸದ್ಭಾವನೆಯಿಂದ ದಾವೆ ಹೂಡುವ ಅವಧಿಯನ್ನು ಹೊರತುಪಡಿಸುವುದು…"*
>
> *(೧) ಯಾವುದೇ ದಾವೆಗೆ ಮಿತಿ ಅವಧಿಯನ್ನು ಲೆಕ್ಕಾಚಾರ ಮಾಡುವಾಗ, ವಾದಿಯು ಪ್ರತಿವಾದಿಯ ವಿರುದ್ಧ ಯಾವುದೇ ಇತರ ಸಿವಿಲ್ ದಾವೆಯನ್ನು ನ್ಯಾಯಾಲಯದಲ್ಲಿ ಅಥವಾ ಮೇಲ್ಮನವಿ ಅಥವಾ ಪರಿಷ್ಕರಣೆಯಲ್ಲಿ ಶ್ರದ್ಧೆಯಿಂದ ಮುಂದುವರಿಸುತ್ತಿರುವ ಸಮಯವನ್ನು ಹೊರತುಪಡಿಸಬೇಕು. ಆ ದಾವೆಯು ಅದೇ ವಿಷಯಕ್ಕೆ ಸಂಬಂಧಿಸಿದ್ದಾಗ ಮತ್ತು ನ್ಯಾಯವ್ಯಾಪ್ತಿಯ ಕೊರತೆ ಅಥವಾ ಅಂತಹುದೇ ಸ್ವಭಾವದ ಇತರ ಕಾರಣದಿಂದಾಗಿ ಅದನ್ನು ಪರಿಗಣಿಸಲು ಸಾಧ್ಯವಾಗದ ನ್ಯಾಯಾಲಯದಲ್ಲಿ ಸದ್ಭಾವನೆಯಿಂದ ಮುಂದುವರಿಸಿದಾಗ.*
>
> *(೨) ಯಾವುದೇ ಅರ್ಜಿಗೆ ಮಿತಿ ಅವಧಿಯನ್ನು ಲೆಕ್ಕಾಚಾರ ಮಾಡುವಾಗ, ಅರ್ಜಿದಾರರು ಅದೇ ಪರಿಹಾರಕ್ಕಾಗಿ ಅದೇ ಪಕ್ಷದ ವಿರುದ್ಧ ನ್ಯಾಯಾಲಯದಲ್ಲಿ ಅಥವಾ ಮೇಲ್ಮನವಿ ಅಥವಾ ಪರಿಷ್ಕರಣೆಯಲ್ಲಿ ಶ್ರದ್ಧೆಯಿಂದ ಮುಂದುವರಿಸುತ್ತಿರುವ ಇತರ ಸಿವಿಲ್ ದಾವೆಯನ್ನು ಹೊರತುಪಡಿಸಬೇಕು. ಅಂತಹ ದಾವೆಯನ್ನು ನ್ಯಾಯವ್ಯಾಪ್ತಿಯ ಕೊರತೆ ಅಥವಾ ಅಂತಹುದೇ*

*ಸ್ವಭಾವದ ಇತರ ಕಾರಣದಿಂದಾಗಿ ಅದನ್ನು ಪರಿಗಣಿಸಲು ಸಾಧ್ಯವಾಗದ ನ್ಯಾಯಾಲಯದಲ್ಲಿ ಸದ್ಭಾವನೆಯಿಂದ ಮುಂದುವರಿಸಿದಾಗ..."*

ಸರ್ವೋಚ್ಚ ನ್ಯಾಯಾಲಯವು ಈ ನಿಬಂಧನೆಯನ್ನು **ಶೇಷ್ ನಾಥ್ ಸಿಂಗ್ [ವಿ.] ಬೈದ್ಯಬಾಟಿ ಶಿಯೋರಾಫುಲಿ ಸಹಕಾರಿ ಬ್ಯಾಂಕ್ ಲಿಮಿಟೆಡ್**[6] ಪ್ರಕರಣದಲ್ಲಿ ಉದಾರವಾಗಿ ಅರ್ಥೈಸಿದ್ದು, ಪುಟ ೩೪೨ ರಲ್ಲಿ ಈ ಕೆಳಗಿನಂತೆ ಹೇಳಿದೆ ಮತ್ತು ಅದು ಮೇಲ್ಮನವಿ ಅರ್ಜಿದಾರನಿಗೆ ಪೂರಕವಾಗಿರುತ್ತದೆ.

*"...೭೫. ಮಿತಿ ಕಾಯಿದೆಯ ಕಲಂ ೧೪ ಅನ್ನು ಸಂಪೂರ್ಣವಾಗಿ ಓದಬೇಕು. ಕಲಂ ೧೪ ರ ಉಪ-ವಿಭಾಗಗಳು (೧), (೨) ಮತ್ತು (೩) ಗಳ ಜಂಟಿ ಮತ್ತು ಎಚ್ಚರಿಕೆಯಿಂದ ಓದುವುದರಿಂದ, ನ್ಯಾಯವ್ಯಾಪ್ತಿಯ ಕೊರತೆ ಅಥವಾ ಅಂತಹುದೇ ಸ್ವಭಾವದ ಯಾವುದೇ ಇತರ ಕಾರಣದಿಂದಾಗಿ ಅದನ್ನು ಪರಿಗಣಿಸಲು ಸಾಧ್ಯವಾಗದ ವೇದಿಕೆಯ ಮುಂದೆ ಶ್ರದ್ಧೆಯಿಂದ ಮತ್ತೊಂದು ಸಿವಿಲ್ ದಾವೆಯನ್ನು ಮುಂದುವರಿಸಿದ ಅರ್ಜಿದಾರರು, ಮಿತಿ ಅವಧಿಯನ್ನು ಲೆಕ್ಕಾಚಾರ ಮಾಡುವಾಗ, ಅರ್ಜಿದಾರರು ಅಂತಹ ದಾವೆಯನ್ನು ಮುಂದುವರಿಸುತ್ತಿರುವ ಸಮಯವನ್ನು ಹೊರತುಪಡಿಸುವ ಹಕ್ಕನ್ನು ಹೊಂದಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಕಲಂ ೧೪ ರ ಉಪ-ವಿಭಾಗಗಳು (೧), (೨) ಮತ್ತು (೩) ರ ಮೂಲ ನಿಬಂಧನೆಗಳು ಕಲಂ ೧೪ ಅನ್ನು ಸದ್ಭಾವನೆಯಿಂದ ಮುಂದುವರಿಸಿದ ಹಿಂದಿನ ಕಾರ್ಯವಾಹಿ ಸಮ್ಮತವಾದ ನಂತರ ಮಾತ್ರ ಆಹ್ವಾನಿಸಬಹುದು ಎಂದು ಹೇಳುವುದಿಲ್ಲ..."*

ಮೇಲಿನಂತೆ ರಿಯಾಯಿತಿಯನ್ನು ನೀಡಿದ್ದಲ್ಲಿ, ಪ್ರೊಬೇಟ್ ಪ್ರದಾನಕ್ಕಾಗಿ ದಿನಾಂಕ ೧೪.೦೭.೨೦೧೭ರಂದು ಸ್ಥಾಪಿಸಲಾದ ಪ್ರೊಬೇಟ್ ಸಿ.ಪಿ.ಸಂಖ್ಯೆ ೩/೨೦೧೭, ೧೯೬೩ರ ಅಧಿನಿಯಮದ ಪರಿಶಿಷ್ಟದ ಅನುಚ್ಛೇದ ೧೩೭ರಲ್ಲಿ ನಿಗದಿಪಡಿಸಿರುವ ಮೂರು ವರ್ಷದ ಕಾಲಮಿತಿಯೊಳಗೆ ಬರುವುದೆಂದು ಪರಿಗಣಿಸಬೇಕಾಗುತ್ತದೆ.

ಮೇಲ್ಕಾಣಿಸಿದ ಕಾರಣಗಳಿಂದಾಗಿ ಈ ಮೇಲ್ಮನವಿಯನ್ನು ಪುರಸ್ಕರಿಸಲಾಗಿ, ಏಕಸದಸ್ಯ ಪೀಠವು ಮಾಡಿದ್ದ ಪ್ರಶ್ನಿಸಲ್ಪಟ್ಟ ತೀರ್ಪು ಮತ್ತು ಆದೇಶವನ್ನು

---

[6] (2021) 7 SCC 313

ಅನೂರ್ಜಿತಗೊಳಿಸಲಾಗಿದೆ; ಪ್ರತಿವಾದಿಗಳು ಸಲ್ಲಿಸಿದ ಮಧ್ಯಂತರ ಅರ್ಜಿ ಐ.ಎ.ಸಂಖ್ಯೆ ೨/೨೦೨೩ನ್ನು ವಜಾಗೊಳಿಸಲಾಗಿದೆ. ತತ್ಪರಿಣಾಮವಾಗಿ ಮೇಲ್ಮನವಿದಾರನ ದಾವೆ ಟಿಓಎಸ್ ಸಂಖ್ಯೆ ೧/೨೦೨೩ನ್ನು ಪುನರುಜ್ಜೀವನಗೊಳಿಸಲಾಗಿದ್ದು, ಅದನ್ನು ಏಕಸದಸ್ಯ ಪೀಠವು ವಿಚಾರಣೆಗೆ ಕೈಗೆತ್ತಿಕೊಂಡು ಕಾನೂನಿನ ರೀತ್ಯ ವಿಲೇವಾರಿ ಮಾಡಬೇಕಾಗುತ್ತದೆ.

ಯಾವ ಪಕ್ಷದವರೂ ಈ ಮೇಲ್ಮನವಿಯ ವೆಚ್ಚ ಭರಿಸುವಂತಿಲ್ಲ.

**ಸಹಿ/-**
**(ಕೃಷ್ಣ ಎಸ್ ದೀಕ್ಷಿತ್)**
**ನ್ಯಾಯಮೂರ್ತಿ**

**ಸಹಿ/-**
**(ಸಿ ಎಂ ಜೋಶಿ)**
**ನ್ಯಾಯಮೂರ್ತಿ**

*ಶ್ರೀಮತಿ ಉಮಾ, ಬೆರಳಚ್ಚುಗಾರರು.

*ಪು. ಸಂಖ್ಯೆ 15 - ಕಛೇರಿ ಆದೇಶ 18.12.2024 ರಂತೆ ಪುಟ್ಟ ತಿದ್ದುಪಡಿಯನ್ನು ಮಾಡಲಾಗಿದೆ.